# ವಿಜಯಪುರ ಜಿಲ್ಲೆಯ ಸ್ಮಾರಕಗಳ ಸಂರಕ್ಷಣೆ ಮತ್ತು ಸೌಲಭ್ಯ

**ಗೋವರ್ಧನ ಪಿ. ಬಿ.**

ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬಾದಾಮಿ, ಬಾಗಲಕೋಟೆ ಜಿಲ್ಲೆ.

DOI: https://doi.org/10.5281/zenodo.17296038

## ABSTRACT:

ದಕ್ಷಿಣ ಭಾರತದ ರಾಣಿ, ಗುಂಬಜ್‌ಗಳ ನಗರ ಎಂದೇ ಪ್ರಸಿದ್ಧಿ ಪಡೆದ ವಿಜಯಪುರವು ಕರ್ನಾಟಕ ಚರಿತ್ರೆಯಲ್ಲಿ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕವಾಗಿ ಬಹು ಮುಖ್ಯ ಪಾತ್ರವನ್ನು ವಹಿಸಿದೆ. ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಕೃಷ್ಣ, ಮಲಪ್ರಭಾ, ಘಟಪ್ರಭಾ, ಭೀಮಾ, ಡೋಣಿ ಎಂಬ ಐದು ನದಿಗಳು ಹರಿಯುವುದರಿಂದ ಪಂಚ ನದಿಗಳ ನಾಡು ಎಂದೇ ಪ್ರಸಿದ್ಧವಾಗಿತ್ತು. ಹಾಗಾಗಿ ಈ ಜಿಲ್ಲೆಯಲ್ಲಿ ಕರ್ನಾಟಕದ ಎರಡು ಪ್ರಸಿದ್ಧ ರಾಜಮನೆತನಗಳಾದ ಬಾದಾಮಿ ಚಾಲುಕ್ಯರು ಮತ್ತು ಆದಿಲ್ ಶಾಹಿಗಳು ತಮ್ಮ ರಾಜಧಾನಿ ಕೇಂದ್ರಗಳನ್ನು ಹೊಂದಿ ತಮ್ಮ ಆಡಳಿತ ಅವಧಿಯಲ್ಲಿ ಸಾಕಷ್ಟು ಸ್ಮಾರಕಗಳನ್ನು ಜಿಲ್ಲೆಯಾದ್ಯಂತ ನಿರ್ಮಾಣ ಮಾಡಿದರು. ವಿಜಯಪುರವನ್ನು ರಾಜಧಾನಿ ಕೇಂದ್ರವನ್ನಾಗಿ ಹೊಂದಿದ್ದ ಆದಿಲ್‌ಶಾಹಿಗಳು ಭಾರತೀಯ ವಾಸ್ತುಶಿಲ್ಪ ವೈಭವಕ್ಕೆ ಅಮೂಲ್ಯ ಕಾಣಿಕೆ ನೀಡಿದ್ದಾರೆ. ಕರ್ನಾಟಕದ ಕಲಾ ಪರಂಪರೆಯಲ್ಲಿ ಆದಿಲ್ ಶಾಹಿಗಳ ರಚನೆಗೆ ಗಣ್ಯ ಸ್ಥಾನವಿದೆ. ದಕ್ಷಿಣ ಭಾರತದಲ್ಲಿ ಇಸ್ಲಾಮಿಕ್ ವಾಸ್ತುಶಿಲ್ಪ ಇವರ ಕಾಲದಲ್ಲಿ ಪರಮೋತ್ಕೃಷ್ಟತೆ ಮುಟ್ಟಿತು. ಇವರು ಕಲಾತ್ಮಕ ದೃಷ್ಟಿಯಿಂದ ವಿಜಯಪುರವನ್ನು ಸುಂದರ ಕಟ್ಟಡಗಳಿಂದ ಅಲಂಕರಿಸಿದರು. ಅವರು ತಮ್ಮ ಕಾಲದ ಸಂಪತ್ತನ್ನೆಲ್ಲ ಭವ್ಯ ಕಟ್ಟಡಗಳಿಗೆ ವಿನಿಯೋಗಿಸಿದರು. ಅವರ ಬದುಕು ಕಲೆಗೆ ಮೀಸಲಾಗಿತ್ತು, ಅವರ ಕೀರ್ತಿ ನಿಂತಿರುವುದು ಈ ಭವ್ಯ ಕಟ್ಟಡಗಳ ಮೇಲೆ. ವಿಜಯಪುರಕ್ಕಿಂತ ಹೆಚ್ಚು ಭವ್ಯ ಕಟ್ಟಡಗಳನ್ನು, ಕಲಾ ವೈಭವವನ್ನು ಪಡೆದಿರುವ ನಗರಗಳು ಭಾರತದಲ್ಲಿ ವಿರಳವೆಂದೇ ಹೇಳಬಹುದು. ಆದ್ದರಿಂದಲೇ ವಿಜಯಪುರವನ್ನು ದಕ್ಷಿಣ ಭಾರತದ ರಾಣಿ ಎಂದು ಕರೆಯಲಾಗಿದೆ. ಇಲ್ಲಿನ ಕಟ್ಟಡಗಳು ಮೊಗಲ್ ಕಟ್ಟಡಗಳ ಜೊತೆ ಸ್ಪರ್ಧಿಸಲು ಯೋಗ್ಯವಾಗಿವೆ. ಬಿಜಾಪುರ ಶೈಲಿಯು ಬೀದರ್‌ನ ಬರಿದ್ ಶಾಹಿ ಶೈಲಿಯ ವಿಕಸಿತ ರೂಪವಾಗಿದ್ದು, ದೆಹಲಿ ಸುಲ್ತಾನ ಶೈಲಿಗಿಂತ ಭಿನ್ನವಾಗಿದ್ದು ತನ್ನದೇ ಸ್ವಂತಿಕೆಯನ್ನು ಹೊಂದಿದೆ. ಇಲ್ಲಿನ ಕಟ್ಟಡಗಳು ಹಿಂದೂ – ಮುಸ್ಲಿಂ ಶೈಲಿಯಾದ ಇಂಡೋ–ಸೆರಾಸಾನಿಕ್ ಶೈಲಿಯಲ್ಲಿವೆ. ಡಾ. ಎಂ. ಹೆಚ್. ಕೃಷ್ಣ ಅವರು ಹೇಳಿರುವಂತೆ ದೆಹಲಿ ಮತ್ತು ಆಗ್ರಾ ನಗರಗಳನ್ನು ಬಿಟ್ಟರೆ ಭಾರತೀಯ ಮುಸ್ಲಿಂ ವಾಸ್ತುಶಿಲ್ಪಕ್ಕೆ ಬಿಜಾಪುರವೇ ತವರಾಗಿದೆ. ಬೃಹತ್ ಪ್ರಮಾಣದಲ್ಲಿ ಗುಂಬಜ್‌ಗಳನ್ನು ಕಟ್ಟಿದವರಲ್ಲಿ ಆದಿಲ್ ಶಾಹಿಗಳೇ ಮೊದಲಿಗರು. ಬಿಜಾಪುರದ ಗುಮ್ಮಟಗಳು ಜಗತ್ತಿನಲ್ಲಿಯೇ ಅತ್ಯುತ್ತಮವಾದವುಗಳೆಂದು ಕಲಾ ವಿಮರ್ಶಕರು ಹೊಗಳಿದ್ದಾರೆ.

ಬಿಜಾಪುರ ವಾಸ್ತುಶಿಲ್ಪ ಶೈಲಿಯ ಲಕ್ಷಣಗಳೆಂದರೆ ಕಮಲದಳದ ಮೇಲೇರುವ ಅರ್ಧ ಗೋಳಾಕಾರದ ಗುಮ್ಮಟಗಳು, ಕಟ್ಟಡದ ಮೇಲ್ಭಾಗದಲ್ಲಿ ಮಿನಾರ್‌ಗಳಿಂದ ಅಲಂಕೃತವಾಗಿರುತ್ತದೆ. ಚತುಷ್ಕೇಂದ್ರ ಮಾದರಿಯ ಕಮಾನುಗಳನ್ನು ಒಳಗೊಂಡಿರುತ್ತವೆ. ಈ ಕಟ್ಟಡಗಳ ವಿಶೇಷತೆ ಎಂದರೆ ಕಂಬಗಳು ಇಲ್ಲದಿರುವುದು. ಅದರ ಬದಲಾಗಿ ದಪ್ಪ ಗೋಡೆಗಳೇ ಕಂಬಗಳಂತಿರುತ್ತವೆ. ಗೋಡೆಯ ಮೇಲೆ ಚಾಚು ಅಲಂಕಾರದಿಂದ ಕೂಡಿರುವುದು ಈ ಶೈಲಿಯ ವಿಶೇಷವಾಗಿದೆ.

ವಿಜಯಪುರದ ಆದಿಲ್ ಶಾಹಿಗಳ ಸ್ಮಾರಕಗಳನ್ನು ಅರಮನೆಗಳು, ಮಸೀದಿಗಳು ಮತ್ತು ಗೋರಿಗಳು ಎಂದು ಮೂರು ಭಾಗಗಳಾಗಿ ನೋಡಬಹುದಾಗಿದೆ.

ಅರಮನೆಗಳು – ವಿಜಯಪುರದಲ್ಲಿ 20ಕ್ಕೂ ಹೆಚ್ಚು ಅರಮನೆಗಳಿದ್ದು ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಗಗನ ಮಹಲ್, ಮೆಹತರ್ ಮಹಲ್, ಅಸಾರ್ ಮಹಲ್,

ಸಂಗೀತ ಮಹಲ್, ಮೋತಿ ಮಹಲ್, ಆನಂದ ಮಹಲ್, ಸಾತ್ ಮಹಲ್, ಚೀನಿ ಮಹಲ್, ಚಂದ ಚಾವಡಿ, ಜಲ ಮಂದಿರಗಳು ಪ್ರಮುಖವಾದವು.

**KEYWORDS:**

ಇಂಡೋ ಸೆರಾಸಾನಿಕ್, ಲಂಡಕಸಬ್, ಸ್ಮಾರಕಗಳು, ಪ್ರವಾಸಿಗರು, ಗೋರಿಗಳು.

ಮಸೀದಿಗಳು – ಬಿಜಾಪುರದಲ್ಲಿ 50ಕ್ಕೂ ಅಧಿಕ ಸಣ್ಣಪುಟ್ಟ ಮಸೀದಿಗಳಿದ್ದು ಅವುಗಳಲ್ಲಿ ಜಾಮಿ ಮಸೀದಿ ಅತ್ಯಂತ ದೊಡ್ಡದು. ಅದು 9100 ಚದರಡಿ ಸುತ್ತಳತೆ ಹೊಂದಿದ್ದು 450 X 828 ಅಡಿ ಉದ್ದ–ಗಲವಿದ್ದು, ಒಟ್ಟಿಗೆ 3000 ಮಂದಿ ಕುಳಿತು ನಮಾಜು ಮಾಡಬಹುದಾಗಿದೆ. ಬಿಜಾಪುರದ ಇತರೇ ಮಸೀದಿಗಳೆಂದರೆ ಮಲ್ಲಿಕ್–ಇ–ಜಹಾನ್ ಬೇಗಂ ಮಸೀದಿ, ಆಲಿ ಶಹೀದ್ ಪೀರ್ ಮಸೀದಿ, ಐನ್ –ಉಲ್ –ಮುಲ್ಕ್ ಮಸೀದಿ, ಇಬ್ರಾಹಿಂ ಮಸೀದಿ, ಬಕಾರಿ ಮಸೀದಿ, ಕರಿಮುದ್ದೀನ್ ಮಸೀದಿ ಮುಖ್ಯವಾದವುಗಳಾಗಿವೆ.

**ಗೋರಿಗಳು – ಬಿಜಾಪುರದಲ್ಲಿ ಮೂರು ಗೋರಿಗಳು ಬಹಳ ಪ್ರಸಿದ್ಧಿ ಹೊಂದಿದ್ದು ಅವುಗಳೆಂದರೆ:**

ಇಬ್ರಾಹಿಂ ರೋಜಾ – ಇದನ್ನು ಜಗದ್ಗುರು ಬಾದಷಾ ಎಂದೇ ಪ್ರಸಿದ್ಧಿ ಪಡೆದ ಎರಡನೇ ಇಬ್ರಾಹಿಂ ಆದಿಲ್ ಶಾನು 1626ರಲ್ಲಿ ನಿರ್ಮಿಸಿದನು. ಇದೊಂದು ಜೋಡಿ ಕಟ್ಟಡವಾಗಿದ್ದು ಒಂದು ಮಸೀದಿ, ಇನ್ನೊಂದು ಸಮಾಧಿ ಕಟ್ಟಡವಾಗಿದೆ. ಭವ್ಯ ವಾಸ್ತುಶಿಲ್ಪಕ್ಕೆ ಹೆಸರಾದ ಇದನ್ನು ಏನಾದರೂ ಅಮೃತ ಶಿಲೆಯಲ್ಲಿ ನಿರ್ಮಿಸಿದ್ದರೆ ತಾಜ್ ಮಹಲ್‌ಅನ್ನು ಮೀರಿಸುತ್ತಿತ್ತಂತೆ. ಹೀಗಾಗಿ ಇದನ್ನು ದಕ್ಷಿಣ ಭಾರತದ ತಾಜ್ ಮಹಲ್ ಎಂದು ಕರೆಯಲಾಗಿದೆ.

ಗೋಲ ಗುಮ್ಮಟ – ಬಿಜಾಪುರದ ಗೋಲ ಗುಮ್ಮಟ ಜಗತ್ತಿನ ಅದ್ಭುತ ವಾಸ್ತು ರಚನೆಗಳಲ್ಲಿ ಒಂದಾಗಿದ್ದು, ಇದನ್ನು ಮೊಹಮ್ಮದ್ ಆದಿಲ್ ಶಾನು ತನ್ನ ಹಾಗೂ ತನ್ನ ರಾಣಿ ಮತ್ತು ಮಕ್ಕಳ ಸಮಾಧಿಗಾಗಿ 1629–1656ರ ಅವಧಿಯಲ್ಲಿ ನಿರ್ಮಿಸಿದನು. ಬಿಜಾಪುರದ ಗೋಲ ಗುಮ್ಮಟ ಪ್ರಪಂಚದ ನಾಲ್ಕನೇ ಮತ್ತು ಭಾರತದ ಅತಿದೊಡ್ಡ ಗುಮ್ಮಟವಾಗಿದೆ. ಗುಮ್ಮಟದ ಒಳಗಿರುವ ಪಿಸು ಮಾತಿನ ಗ್ಯಾಲರಿ ಪ್ರಸಿದ್ಧವಾಗಿದ್ದು, 130 ಅಡಿ ಅಂತರದ ಎದುರು–ಬದುರು ಇರುವ ಆಸನದಲ್ಲಿ ಕುಳಿತು ಪಿಸುಗುಟ್ಟಿದರೆ ಅದು ಇಬ್ಬರಿಗೂ ಸ್ಪಷ್ಟವಾಗಿ ಕೇಳಿಸುತ್ತದೆ. ಇಲ್ಲಿ ಶಬ್ದ ಏಳು ಬಾರಿ ಪ್ರತಿಧ್ವನಿಸುತ್ತದೆ. ಇದು ಇಂಡೋ ಸೆರಾಸಾನಿಕ್ ಶೈಲಿಯಲ್ಲಿದ್ದು ಮಲ್ಲಿಕ್ ಸಂದಲ್ ಇದರ ನಿರ್ಮಾಣ ಶಿಲ್ಪಿಯಾಗಿದ್ದಾನೆ.

ಬಾರಾ ಕಮಾನ್ – ಮೊಹಮ್ಮದ್ ಆದಿಲ್ ಶಾನ ಮಗ ಎರಡನೇ ಆಲಿ ಆದಿಲ್ ಶಾನು ತನ್ನ ತಂದೆ ನಿರ್ಮಿಸಿದ ಗೋಲ ಗುಮ್ಮಟಕ್ಕಿಂತ ದೊಡ್ಡದಾಗಿ ಇದನ್ನು ನಿರ್ಮಿಸಲು ಯೋಜಿಸಿ 20 ಅಡಿ ಎತ್ತರದ ವಿಶಾಲ ಕಟ್ಟೆಯ ಮೇಲೆ 12 ಕಮಾನುಗಳನ್ನು ನಿರ್ಮಿಸಿದನು. ಅದರ ನೆರಳು ಗೋಲ ಗುಮ್ಮಟದ ಮೇಲೆ ಬೀಳುವುದನ್ನು ನೋಡುವ ಆಸೆ ಈಡೇರುವ ಮುನ್ನವೇ ಅವನ ಅಕಾಲಿಕ ಮರಣದಿಂದ ನಿರ್ಮಾಣ ಕಾರ್ಯ ಸ್ಥಗಿತಗೊಂಡಿತು. ಇದೇನಾದರೂ ಪೂರ್ಣಗೊಂಡಿದ್ದರೆ ಅದು ಪ್ರಪಂಚದ ಅದ್ಭುತಗಳಲ್ಲಿ ಒಂದಾಗುತ್ತಿತ್ತು. ಇವಿಷ್ಟೇ ಅಲ್ಲದೆ ತಾಳಿಕೋಟೆ ಕದನದಲ್ಲಿ ವಿಜಯನಗರದ ವಿರುದ್ಧ ಬಳಸಿದ ಮಾಲಿಕ್–ಎ–ಮೈದಾನ್ ಮತ್ತು ಲಂಡಕಸಬ್ ಫಿರಂಗಿಗಳು ಪ್ರವಾಸಿಗರಿಗೆ ಆಕರ್ಷಣೀಯವಾಗಿವೆ.

1686ರಲ್ಲಿ ಆದಿಲ್ ಶಾಹಿ ಸಂತತಿಯನ್ನು ಕೊನೆಗಾಣಿಸಿದ ಔರಂಗಜೇಬನು

ವಿಜಯಪುರವನ್ನು ಮೊಗಲ್ ಸಾಮ್ರಾಜ್ಯಕ್ಕೆ ಸೇರಿಸಿಕೊಂಡರೂ ಇಲ್ಲಿನ ಸ್ಮಾರಕಗಳಿಗೆ ಯಾವುದೇ ಧಕ್ಕೆ ಬರಲಿಲ್ಲ. ಮೊಘಲರ ಪತನದ ನಂತರ ಮರಾಠರು ಮತ್ತು ಬ್ರಿಟಿಷರ ಆಡಳಿತಕ್ಕೆ ವಿಜಯಪುರವು ಒಳಪಟ್ಟಿತ್ತು. ರಾಜಮನೆತನಗಳ ಅವನತಿಯ ನಂತರ ವಿವಿಧ ಕಾರಣಗಳಿಗಾಗಿ ಇಲ್ಲಿನ ಸ್ಮಾರಕಗಳು ನಿರ್ಲಕ್ಷ್ಯಕ್ಕೆ ಒಳಪಟ್ಟವು. 1904 ರಲ್ಲಿ ಭಾರತೀಯ ಪುರಾತತ್ವ ಇಲಾಖೆಯ ನಿರ್ದೇಶಕರಾದ ಸರ್ ಜಾನ್ ಮಾರ್ಷಲ್ ಅವರ ಶಿಫಾರಸ್ಸಿನ ಮೇರೆಗೆ ಅಂದಿನ ಗವರ್ನರ್ ಜನರಲ್ ಲಾರ್ಡ್ ಕರ್ಜನ್ ಅವರು ಪ್ರಾಚೀನ ಸ್ಮಾರಕಗಳ ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತಂದು ಸ್ಮಾರಕಗಳ ಸಂರಕ್ಷಣೆ ಮತ್ತು ಅಭಿವೃದ್ಧಿಗೆ ಕ್ರಮ ಕೈಗೊಂಡಿದ್ದರಿಂದ ಈ ಸ್ಮಾರಕಗಳು ತಮ್ಮ ಹಳೆಯ ವೈಭವವನ್ನು ಮರಳಿ ಪಡೆದುಕೊಂಡು ಪ್ರವಾಸಿಗರನ್ನು ತಮ್ಮತ್ತ ಕರೆಯತೊಡಗಿದವು. ಹೆಚ್ಚು ಹೆಚ್ಚು ಪ್ರವಾಸಿಗರು ಭೇಟಿ ನೀಡತೊಡಗಿದ್ದರಿಂದ ಪ್ರವಾಸೋದ್ಯಮ ಬೆಳೆದು ಸರ್ಕಾರಕ್ಕೂ ಮತ್ತು ಸ್ಥಳೀಯರಿಗೆ ಆದಾಯ ಬರಲು ಕಾರಣವಾಯಿತು.

ಪ್ರವಾಸೋದ್ಯಮ ಆಧುನಿಕ ಜಗತ್ತಿನಲ್ಲಿ ಬೃಹತ್ ಉದ್ದಿಮೆಯಾಗಿ ಬೆಳೆಯುತ್ತಿರುವುದರಿಂದ ಇದರ ಲಾಭವನ್ನು ಪ್ರವಾಸಿಗರ ಆಕರ್ಷಣೀಯ ಕೇಂದ್ರವಾಗಿರುವ ವಿಜಯಪುರವು ಪಡೆಯಬಹುದಾಗಿದ್ದು ಇಲ್ಲಿನ ಸ್ಮಾರಕಗಳನ್ನು ಹಾಳಾಗದಂತೆ ಸಂರಕ್ಷಿಸಿ ಹಾಗೂ ಇಲ್ಲಿಗೆ ಹೆಚ್ಚು ಹೆಚ್ಚು ಭೇಟಿ ನೀಡಲು ಪ್ರವಾಸಿಗರನ್ನು ಪ್ರೋತ್ಸಾಹಿಸುವ ಸಲುವಾಗಿ ಉತ್ತಮ ಸೌಲಭ್ಯಗಳನ್ನು ಒದಗಿಸುವುದರ ಮೂಲಕ ಹೆಚ್ಚು ಪ್ರವಾಸಿಗರನ್ನು ಸೆಳೆಯಬಹುದಾಗಿದೆ.

**ವಿಜಯಪುರದ ಪ್ರಾಚೀನ ಸ್ಮಾರಕಗಳ ಸಂರಕ್ಷಣೆ (Conservation)**

ಕನ್ಸರ್ವೇಷನ್ ಎಂದರೆ ಸಾಂಸ್ಕೃತಿಕ ಮತ್ತು ಐತಿಹಾಸಿಕ ಸ್ಮಾರಕಗಳನ್ನು ಸಂರಕ್ಷಿಸುವುದು ಎಂದರ್ಥ. ವಿಜಯಪುರದ ಸ್ಮಾರಕಗಳನ್ನು ಈ ಕೆಳಕಂಡ ಸಂರಕ್ಷಣಾ ಕ್ರಮಗಳ ಮೂಲಕ ಸಂರಕ್ಷಿಸಬಹುದಾಗಿದೆ.

- ಭಾರತದ ಸ್ಮಾರಕಗಳ ಪ್ರಮುಖ ಸಂರಕ್ಷಣಾ ಸಂಸ್ಥೆಯಾದ ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ASI) ಇದು ರಾಷ್ಟ್ರೀಯ ಮಹತ್ವದ ಸ್ಮಾರಕಗಳ ರಕ್ಷಣೆ ಮತ್ತು ನಿರ್ವಹಣೆ ಮಾಡುವ ಸಂಸ್ಥೆಯಾಗಿದ್ದು, ವಿಜಯಪುರದ ಗೋಲ ಗುಮ್ಮಟ ಮತ್ತು ಇಬ್ರಾಹಿಂ ರೋಜಾದಂತಹ ಪ್ರಮುಖ ಸ್ಮಾರಕಗಳು ಇದರ ರಕ್ಷಣೆಯ ಅಡಿಯಲ್ಲಿದ್ದು, ಈ ಸ್ಮಾರಕಗಳಿಗೆ ಅಗತ್ಯತೆ ಮತ್ತು ಸಂಪನ್ಮೂಲ ಲಭ್ಯತೆಯ ಆಧಾರದ ಮೇಲೆ ಕಾಲಕಾಲಕ್ಕೆ ದುರಸ್ತಿ ಕಾರ್ಯಗಳನ್ನ ನಡೆಸುತ್ತದೆ. ಹಾಗೆಯೇ ಗೋಲ ಗುಮ್ಮಟದ ಆವರಣದಲ್ಲಿರುವ ಮ್ಯೂಸಿಯಂ ಮೂಲಕ ಆದಿಲ್ ಶಾಹಿಗಳ ಅವಧಿಯ ಶಾಸನಗಳು, ಶಿಲ್ಪಗಳು, ಹಸ್ತಪ್ರತಿಗಳು ಮತ್ತು ಕಲಾ ಕೃತಿಗಳನ್ನು ಸಂರಕ್ಷಿಸಿ ಪ್ರದರ್ಶಿಸುವ ಕೆಲಸವನ್ನು ಮಾಡುತ್ತಿದೆ.
- ಹಾಗೆ ವಿಜಯಪುರದಲ್ಲಿರುವ ಐತಿಹಾಸಿಕ ಜಲಮೂಲಗಳು (ಬಾವಡಿಗಳು) ಪುನರ್ಜೀವನಗೊಳಿಸಲು ಸ್ಥಳೀಯ ಆಡಳಿತ ಹಾಗೂ ಕಾರ್ಪೊರೇಟ್ ಕಂಪನಿಗಳ ಸಾಮಾಜಿಕ ಹೊಣೆಗಾರಿಕೆ ನಿಧಿಗಳು ಮತ್ತು ಎನ್‌ಜಿಓಗಳ ಮೂಲಕ ಪ್ರಯತ್ನಿಸಬಹುದಾಗಿದೆ.
- ಸ್ಥಳೀಯ ನಾಗರಿಕರಲ್ಲಿ ಸ್ಮಾರಕಗಳ ಬಗ್ಗೆ ಜಾಗೃತಿ ಮೂಡಿಸಿ, ಸ್ಮಾರಕಗಳ ರಕ್ಷಣೆಯ ಕಾಳಜಿ ಉಳ್ಳ ನಾಗರಿಕರನ್ನ ಸಂಘಟಿಸಿ, ಪರಂಪರೆ ನಡಿಗೆ ಮತ್ತು ನಿರ್ಲಕ್ಷಿತ

ಸ್ಮಾರಕಗಳನ್ನು ಸ್ವಚ್ಛಗೊಳಿಸುವ ಮೂಲಕ ಜನರಲ್ಲಿ ಜಾಗೃತಿ ಮತ್ತು ಸಂರಕ್ಷಣೆಯನ್ನು ಮಾಡಬಹುದಾಗಿದೆ.

- ಪುರಾತತ್ವ ಇಲಾಖೆಯ ಮೇಲ್ವಿಚಾರಣೆ ಅಡಿಯಲ್ಲಿ ಹಾಳಾಗುತ್ತಿರುವ ಅರಮನೆಗಳು, ಕೋಟೆ ಗೋಡೆಗಳು, ಸಮಾಧಿಗಳನ್ನು ನವೀಕರಿಸುವ ಮೂಲಕ ವಿಜಯಪುರದ ಸ್ಮಾರಕಗಳನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಉಳಿಸಬಹುದಾಗಿದೆ.

**ರಿಸರ್ವೇಶನ್ (Reservation) – ವ್ಯವಸ್ಥಿತ ಸೌಲಭ್ಯ ಒದಗಿಸುವುದು**

ರಿಸರ್ವೇಶನ್ ಎಂದರೆ ಪ್ರವಾಸಿಗರ ಅನುಕೂಲಕ್ಕಾಗಿ ವ್ಯವಸ್ಥಿತ ಸೌಲಭ್ಯಗಳನ್ನು ಒದಗಿಸುವುದು ಎಂದರ್ಥ.

ವಿಜಯಪುರದ ಸ್ಮಾರಕಗಳನ್ನು ವೀಕ್ಷಿಸಲು ಭೇಟಿ ಮಾಡುವ ಪ್ರವಾಸಿಗಳ ಅನುಕೂಲಕ್ಕಾಗಿ ಈ ಕೆಳಕಂಡ ಮುಂಗಡ ಕಾಯ್ದಿರಿಸುವ ವ್ಯವಸ್ಥೆಯ ಮೂಲಕ ಅತ್ಯುತ್ತಮ ಸೌಲಭ್ಯಗಳನ್ನು ಒದಗಿಸಬಹುದಾಗಿದೆ.

- ಹೋಟೆಲ್, ಲಾಡ್ಜ್ ಗಳನ್ನು ಮುಂಗಡವಾಗಿ ಕಾಯ್ದಿರಿಸಲು ಆನ್‌ಲೈನ್ ಬುಕಿಂಗ್ ಮಾಡಲು ವ್ಯವಸ್ಥೆ ಕಲ್ಪಿಸುವುದು.
- ಸ್ಮಾರಕಗಳ ಪ್ರವೇಶ ಟಿಕೆಟ್‌ಗಳನ್ನು ಆನ್‌ಲೈನ್ ಮೂಲಕ ಕಾಯ್ದಿರಿಸಲು ವ್ಯವಸ್ಥೆಯನ್ನು ಕಲ್ಪಿಸುವುದು.
- ಸೈಟ್ ಸೀಯಿಂಗ್ (ಸ್ಮಾರಕಗಳ ವೀಕ್ಷಣೆ) ಗೆ ಬಸ್ ಮತ್ತು ಗೈಡ್‌ಗಳ ಸೇವೆಯನ್ನು ಮುಂಗಡವಾಗಿ ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸುವುದು.
- ಸಾಂಸ್ಕೃತಿಕ ಉತ್ಸವಗಳು ಮತ್ತು ಮೇಳಗಳ ಆಸನಗಳನ್ನು ಮುಂಗಡವಾಗಿ ಕಾಯ್ದಿರಿಸುವ ವ್ಯವಸ್ಥೆಯನ್ನು ಕಲ್ಪಿಸುವುದು.
- ಹಾಗೆ ವಿಜಯಪುರಕ್ಕೆ ಭೇಟಿ ನೀಡುವ ಪ್ರವಾಸಿಗರಿಗೆ ಸುರಕ್ಷತೆ, ಸಾರಿಗೆ ವ್ಯವಸ್ಥೆ ಮತ್ತು ಮಾರ್ಗದರ್ಶನ ನೀಡುವ ವ್ಯವಸ್ಥೆಯನ್ನು ಕಲ್ಪಿಸುವುದು.

ಈ ಕ್ರಮಗಳ ಮೂಲಕ ಪ್ರವಾಸೋದ್ಯಮವನ್ನು ಅಭಿವೃದ್ಧಿಗೊಳಿಸಬಹುದಾಗಿದೆ.

**ರಿಸರ್ವೇಶನ್ ಮತ್ತು ಕನ್ಸರ್ವೇಶನ್‌ನ ಮಹತ್ವ**

ನಮ್ಮ ಪರಂಪರೆಯ ಹೆಮ್ಮೆಗಳಾದ ಸ್ಮಾರಕಗಳನ್ನು ಸಂರಕ್ಷಿಸುವುದರಿಂದ ಮತ್ತು ಅವುಗಳನ್ನು ವೀಕ್ಷಿಸಲು ಭೇಟಿ ನೀಡುವ ಪ್ರವಾಸಿಗಳಿಗೆ ವ್ಯವಸ್ಥಿತ ಸೌಲಭ್ಯ ಒದಗಿಸುವುದರಿಂದ ನಮ್ಮ ಐತಿಹಾಸಿಕ ಪರಂಪರೆಯನ್ನು ಮುಂದಿನ ಪೀಳಿಗೆಗೆ ಉಳಿಸಬಹುದಾಗಿದೆ. ಹಾಗೆ ಪ್ರವಾಸೋದ್ಯಮದಿಂದ ಸ್ಥಳೀಯ ಜನರಿಗೆ ಉದ್ಯೋಗಾವಕಾಶವನ್ನು ಹೆಚ್ಚಿಸಿ ಅವರ ಆರ್ಥಿಕ ಅಭಿವೃದ್ಧಿಗೆ ದಾರಿ ಮಾಡಿಕೊಡಬಹುದಾಗಿದೆ.

**ಪರಾಮರ್ಶನ ಗ್ರಂಥಗಳು:**


1. ನಾಗೇಗೌಡ 'ಹೆಚ್.', (2006) 'ಪ್ರವಾಸಿ ಕಂಡ ಇಂಡಿಯಾ', ಐಬಿಎಚ್ ಪ್ರಕಾಶನ, ಬೆಂಗಳೂರು.
2. ನಾಗಪತಿ ಕೆ. ಎಸ್., (2012) 'ಪ್ರವಾಸೋದ್ಯಮ ಅಭಿವೃದ್ಧಿ ಒಂದು ಹೊಸ ಆಯಾಮ', ಅನನ್ಯ ಪ್ರಕಾಶನ, ಚಾಮರಾಜಪುರ, ಮೈಸೂರು.
3. ಕೊಲ್ಹಾರ ಕುಲಕರ್ಣಿ ಕೃಷ್ಣ., (2002) 'ಬಿಜಾಪುರ ಆದಿಲ್ ಷಾಹಿ', ಸಿಕ್ಯಾಬ್ ಆದಿಲ್ ಷಾಹಿ ಅಧ್ಯಯನ ಸಂಸ್ಥೆ, ವಿಜಾಪುರ.
4. ಕಡಕೋಳ ಹೆಚ್. ಎಂ., (2010) 'ಬಿಜಾಪುರ ಜಿಲ್ಲಾ ಸಾಂಸ್ಕೃತಿಕ ಪರಂಪರೆ', ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ವಿಜಾಪುರ.
5. ಚವ್ಹಾಣ ಎನ್., (2004), 'ಆದಿಲ್‌ಷಾಹಿಗಳ ಕಾಲದ ಪ್ರಮುಖ ಸ್ಮಾರಕಗಳು', ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
6. ಆರ್. ಮುನಿಸ್ವಾಮಿ., (2019) 'ವಿಜಾಪುರ ಜಿಲ್ಲಾ ಗ್ಯಾಸೆಟಿಯರ್', ಕರ್ನಾಟಕ ರಾಜ್ಯ ಗ್ಯಾಸೆಟಿಯರ್ ಇಲಾಖೆ, ಬೆಂಗಳೂರು.
7. ಅಶ್ವತಪ್ಪ ಕೆ.ಎನ್., 'ಭಾರತದಲ್ಲಿ ಪ್ರವಾಸೋದ್ಯಮ ಇತಿಹಾಸ' :, ಎಸ್. ಬಿ. ಎಸ್. ಪಬ್ಲಿಕೇಶನ್, ಬೆಂಗಳೂರು.



**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.



**About the License:**

© The Authors 2024. The text of this article is open access and licensed under a Creative Commons Attribution 4.0 International License.